# ನಿಮ್ಮೊಡನೆ

## ಶಿಕ್ಷಣ ಸಾಲದ ಅರಿವು ಮೂಡಿಸಿ

ಎಸ್ಸೆಸ್ಸೆಲ್ಸಿ, ಪಿಯು ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ರಾಜ್ಯದ ಅನೇಕ ವಿದ್ಯಾರ್ಥಿಗಳು ಮುಂದೆ ಯಾವುದೇ ವೃತ್ತಿಪರ ಶಿಕ್ಷಣ ಪಡೆಯುವುದಕ್ಕೆ ಶಿಕ್ಷಣ ವೆಚ್ಚವನ್ನು ಭರಿಸಲು ಸಾಧ್ಯವಿಲ್ಲವೆಂದು ಕೈಚೆಲ್ಲಿದ ಪ್ರಕರಣಗಳು ಈಚೆಗೆ ವರದಿಯಾಗಿದ್ದವು. ಕೂಲಿ ಕೆಲಸ ಮಾಡುತ್ತ ಶಿಕ್ಷಣ ಮುಂದುವರಿಸಿದವರು ಅತ್ಯುತ್ತಮ ಮಟ್ಟದ ಅರ್ಹತೆಯನ್ನು ಗಳಿಸಿದರೂ ಹಣದ ಕೊರತೆಯ ಕಾರಣ ಮುಂದೆ ಓದಲಾಗದ ಪರಿಸ್ಥಿತಿ. ಅಂಥವರಿಗೆ ಕೇಂದ್ರ ಸರ್ಕಾರ ಈಗ ರೂಪಿಸಿದ ಶಿಕ್ಷಣ ಸಾಲದ ಯೋಜನೆ ವರವಾಗಲಿದೆ.

ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಪಡೆಯುವುದು ಪ್ರತಿ ಮಗುವಿನ ಹಕ್ಕು ಎಂದು ಕಡ್ಡಾಯ ಶಿಕ್ಷಣದ ಪರಿಕಲ್ಪನೆಯನ್ನು ಇನ್ನಷ್ಟು ವಿಸ್ತರಿಸಿರುವ ಕೇಂದ್ರ ಸರ್ಕಾರ ಬಡತನದ ಕಾರಣದಿಂದ ಪ್ರತಿಭಾವಂತ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಚಿಂತನೆಯನ್ನು ನಡೆಸಿದೆ. ಇದು ಚರ್ಚೆಯ ಮಟ್ಟದಲ್ಲಿ ಉಳಿದಿಲ್ಲ ಎಂಬುದು ಸಮಾಧಾನದ ಸಂಗತಿ. ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ಬರುವಂತೆ ಶಿಕ್ಷಣ ಸಾಲದ ಯೋಜನೆಯನ್ನು ರೂಪಿಸಿದೆ. ಅದರಂತೆ ವರ್ಷಕ್ಕೆ 4.5 ಲಕ್ಷ ರೂಪಾಯಿವರೆಗಿನ ವರಮಾನ ಇರುವ ಯಾವುದೇ ಕುಟುಂಬದ ವಿದ್ಯಾರ್ಥಿ ಅರ್ಹತೆಯ ಮೇಲೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದರೆ ಅವರಿಗೆ ಶಿಕ್ಷಣ ಸಾಲ ನೀಡುವುದಕ್ಕೆ ರಾಷ್ಟ್ರೀಕೃತ ಬ್ಯಾಂಕುಗಳೊಂದಿಗೆ ಚರ್ಚಿಸಿ ನಿಯಮಗಳನ್ನು ರೂಪಿಸಲಾಗಿದೆ.

ಕಪಿಲ್ ಸಿಬಲ್ ಕೇಂದ್ರದ ಮಾನವ ಸಂಪನ್ಮೂಲ ಸಚಿವರಾದ ನಂತರ ಶಿಕ್ಷಣಕ್ಕೆ ಸಂಬಂಧಿಸಿ ಕೈಗೊಂಡ ಮಹತ್ವದ ನಿರ್ಣಯಗಳಲ್ಲಿ ಈ ಶಿಕ್ಷಣ ಸಾಲದ ಯೋಜನೆಯೂ ಒಂದು. ಈಗಾಗಲೇ ಪ್ರೌಢ ಶಿಕ್ಷಣ ಹಂತದಲ್ಲಿ ವಿಜ್ಞಾನ, ಗಣಿತ ಮತ್ತು ವಾಣಿಜ್ಯ ವಿಷಯಗಳಲ್ಲಿ ದೇಶಾದ್ಯಂತ ಏಕರೂಪದ ಪಠ್ಯಕ್ರಮಗಳನ್ನು ಅಳವಡಿಸಿ ರಾಷ್ಟ್ರೀಯ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಮಾನ ಶೈಕ್ಷಣಿಕ ಮಟ್ಟದ ಅರ್ಹತಾ ಮಾನದಂಡವನ್ನು ಕಲ್ಪಿಸುವ ಚಿಂತನೆ ನಡೆಸಿದ್ದು ಅದು ಅನುಷ್ಠಾನದ ಹಂತದಲ್ಲಿದೆ. ಶಿಕ್ಷಣದ ವಿಷಯ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಂಟಿ ಸಹಯೋಗದಿಂದ ಅನುಸರಣೆಯಾಗಬೇಕಿರುವುದರಿಂದ ಹೊಸಬಗೆಯ ಚಿಂತನೆಗಳಿಗೆ ರಾಜ್ಯಗಳ ಸಹಕಾರ ಅವಶ್ಯಕವಿರುತ್ತದೆ. ಹತ್ತನೆಯ ತರಗತಿ ಮತ್ತು ನಂತರದ ಎರಡು ವರ್ಷಗಳ ಶಿಕ್ಷಣದ ಹಂತದವರೆಗಿನ ಮೂಲ ವಿಷಯಗಳ ಪಠ್ಯಪುಸ್ತಕಗಳಲ್ಲಿ ಸಮಾನತೆಯನ್ನು ಸಾಧಿಸುವುದು ಕೃತಿರೂಪಕ್ಕೆ ಇಳಿದರೆ ದೇಶದ ಯಾವುದೇ ರಾಜ್ಯದ ವಿದ್ಯಾರ್ಥಿ ರಾಷ್ಟ್ರೀಯಮಟ್ಟದ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆಗಳಲ್ಲಿ ಪಾಲ್ಗೊಳ್ಳುವುದರಲ್ಲಿ ಹಿಂಜರಿಕೆಯನ್ನು ಅನುಭವಿಸಬೇಕಿಲ್ಲ.

ಎಸ್ಸೆಸ್ಸೆಲ್ಸಿ, ಪಿಯು ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ರಾಜ್ಯದ ಅನೇಕ ವಿದ್ಯಾರ್ಥಿಗಳು ಮುಂದೆ ಯಾವುದೇ ವೃತ್ತಿಪರ ಶಿಕ್ಷಣ ಪಡೆಯುವುದಕ್ಕೆ ಶಿಕ್ಷಣ ವೆಚ್ಚವನ್ನು ಭರಿಸಲು ಸಾಧ್ಯವಿಲ್ಲವೆಂದು ಕೈಚೆಲ್ಲಿದ ಪ್ರಕರಣಗಳು ಈಚೆಗೆ ವರದಿಯಾಗಿದ್ದವು. ಕೂಲಿ ಕೆಲಸ ಮಾಡುತ್ತ ಶಿಕ್ಷಣ ಮುಂದುವರಿಸಿದವರು ಅತ್ಯುತ್ತಮ ಮಟ್ಟದ ಅರ್ಹತೆಯನ್ನು ಗಳಿಸಿದರೂ ಹಣದ ಕೊರತೆಯ ಕಾರಣ ಮುಂದೆ ಓದಲಾಗದ ಪರಿಸ್ಥಿತಿ. ಅಂಥವರಿಗೆ ಕೇಂದ್ರ ಸರ್ಕಾರ ಈಗ ರೂಪಿಸಿದ ಶಿಕ್ಷಣ ಸಾಲದ ಯೋಜನೆ ವರವಾಗಲಿದೆ.

ಸ್ವಂತ ಪರಿಶ್ರಮದಿಂದ ಯಾವುದೇ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಪಡೆದವರ ಸಮಸ್ತ ಶಿಕ್ಷಣವೆಚ್ಚವನ್ನು ಭರಿಸಲು ಈ ಯೋಜನೆ ಅವಕಾಶ ಮಾಡಿಕೊಡುತ್ತದೆ. ಎಂಜಿನಿಯರಿಂಗ್, ವೈದ್ಯಕೀಯ, ದಂತವೈದ್ಯ, ಕೃಷಿ, ಪಶುಸಂಗೋಪನೆ, ಕಾನೂನು, ವ್ಯವಹಾರ ನಿರ್ವಹಣೆ, ಕಂಪ್ಯೂಟರ್ ಶಿಕ್ಷಣ, ತೆರಿಗೆ ನಿರ್ವಹಣೆ ಮೊದಲಾದ ಹಲವು ಬಗೆಯ ಕೋರ್ಸುಗಳ ಅಧ್ಯಯನಕ್ಕೆ ಗರಿಷ್ಠ ಹತ್ತು ಲಕ್ಷ ರೂಪಾಯಿ ವರೆಗೆ ಸಾಲ ಒದಗಿಸಲು ದೇಶದ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸೂಚಿಸಲಾಗಿದೆ. ವಿದೇಶಗಳಲ್ಲಿ ಅಧ್ಯಯನ ಅವಕಾಶ ಪಡೆದ ಬಡ ಪ್ರತಿಭಾವಂತರು ಗರಿಷ್ಠ 20 ಲಕ್ಷ ರೂಪಾಯಿ ವರೆಗೆ ಸಾಲದ ಸೌಲಭ್ಯ ಪಡೆದು ಶಿಕ್ಷಣವನ್ನು ಮುಂದುವರಿಸಬಹುದಾಗಿದೆ.

ಪ್ರತಿಭಾವಂತರಿಗೆ ಮುಂದೆ ಕಲಿಯಲು ಹಣದ ಕೊರತೆ ಕಾರಣವಾಗಬಾರದು ಎಂಬ ಉದಾತ್ತ ಉದ್ದೇಶದಿಂದ ರೂಪಿಸಲಾಗಿರುವ ಈ ಯೋಜನೆಯಲ್ಲಿ ವಿದ್ಯಾರ್ಥಿಯ ಕುಟುಂಬ ವರ್ಷದ ವರಮಾನ ಕುರಿತ ಪ್ರಮಾಣ ಪತ್ರದ ಪಾತ್ರ ಮಹತ್ವದ್ದು. ಸರ್ಕಾರ ಸದುದ್ದೇಶದಿಂದ ರೂಪಿಸುವ ಕಲ್ಯಾಣ ಕಾರ್ಯಕ್ರಮಗಳು ಅರ್ಹರಿಗೆ ತಲುಪುವುದಕ್ಕಿಂತ ಅನರ್ಹರಿಗೆ ದುರ್ಬಳಕೆ ಆಗುವುದು ಇದುವರೆಗಿನ ಕೆಟ್ಟ ಅನುಭವ. ಅದು ಬಡವರಿಗೆ ರಿಯಾಯಿತಿ ದರದಲ್ಲಿ ಆಹಾರ ಧಾನ್ಯ ಪೂರೈಸುವುದಿರಬಹುದು, ಇಲ್ಲವೇ ಕಡಿಮೆ ಬಡ್ಡಿದರದಲ್ಲಿ ದುರ್ಬಲ ವರ್ಗದವರಿಗೆ ಸಾಲ ನೀಡುವುದಿರಬಹುದು, ದುರುಪಯೋಗವೇ ಪ್ರಗತಿಗೆ ಮಾರಕ. ವರಮಾನ ಕುರಿತ ಪ್ರಮಾಣ ಪತ್ರ ನೀಡಿಕೆಯಲ್ಲಿ ಅಕ್ರಮ ನಡೆಯದಂತೆ ನೋಡಿಕೊಳ್ಳುವ ಹೊಣೆ ರಾಜ್ಯ ಸರ್ಕಾರದ್ದಿದೆ. ಅಂತೆಯೇ ಸಾಲ ನೀಡಬೇಕಾದ ಬ್ಯಾಂಕ್ ಶಾಖೆಗಳ ಮೇನೇಜರ್‌ಗಳಿಗೆ ಅಗತ್ಯ ಮಾರ್ಗಸೂಚಿಗಳನ್ನೂ ನೀಡಬೇಕಿದೆ. ಏಕೆಂದರೆ ಸರ್ಕಾರದ ಯಾವುದೇ ಪುರೋಗಾಮಿ ಯೋಜನೆಗಳನ್ನೂ ಯಶಸ್ವಿಗೊಳಿಸುವುದು ಸಿಬ್ಬಂದಿಯ ಕೈಯಲ್ಲಿದೆ.

■ ಲಕ್ಷ್ಮಣ ಕೊಡಸೆ



ವಿಷ್ಣು